ಈಗಿನಿಂದಲಾದರೂ ಚಿಂತನೆ ಮಾಡಿ.

ಅಧ್ಯಕ್ಷರು: ಮುಂದಿನ ಪ್ರಶ್ನೆ ವಿ.ಕೃಷ್ಣಪ್ಪನವರದು, ಈ ಪ್ರಶ್ನೆಗೆ ಹತ್ತು ದಿವಸ ಸಮಯ ಬೇಕೆಂದು ಸರ್ಕಾರದವರು ಕೇಳಿದ್ದಾರೆ.

ಶ್ರೀ ವಿ.ಕೃಷ್ಣಪ್ಪ: ಮಾನ್ಯ ಅಧ್ಯಕ್ಷರೆ, ನಮ್ಮದು ಒಂದೊಂದೇ ಪ್ರಶ್ನೆ ಬರುವುದು. ಆ ಒಂದು ಪ್ರಶ್ನೆಗೆ ನಮಗೆ ಉತ್ತರ ಬರುವುದಿಲ್ಲವೆಂದರೆ ಹೇಗೆ? ದಯಮಾಡಿ ನಾಳೆ ಅದಕ್ಕೆ ಉತ್ತರ ಕೊಡಿಸಿ.

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಅಧ್ಯಕ್ಷರೆ, ಒಂದು ಪ್ರಶ್ನೆಗೆ ಹತ್ತು ದಿವಸ ಸಮಯ ತೆಗೆದುಕೊಂಡರೆ ಅಷ್ಟೊತ್ತಿಗೆ ಅಧಿವೇಶನ ಮುಗಿದು ಹೋಗುತ್ತದೆ. ಒಂದು ಸ್ಟಾರ್ಡ್ ಕ್ವೆಶ್ಚನ್‌ಗೆ ಹತ್ತು ದಿವಸ ಸಮಯ ತೆಗೆದುಕೊಂಡರೆ ಹೇಗೆ?

ಅಧ್ಯಕ್ಷರು: ಬಹುಶಃ ಅನೇಕ ವಿಷಯಗಳನ್ನು ಸಂಗ್ರಹಿಸಬೇಕಾಗಿದೆ ಎಂದು ಕಾಣುತ್ತದೆ, ಅದಕ್ಕೆ ಇರಬಹುದು.

ಶ್ರೀ ವಿ.ಕೃಷ್ಣಪ್ಪ: ಮಾನ್ಯ ಅಧ್ಯಕ್ಷರೆ, ಕಳೆದ ಸದನದಲ್ಲಿ ಇದೇ ರೀತಿ ಆಯಿತು. ಮತ್ತೇ ಆ ಪ್ರಶ್ನೆ ಬರುವುದೇ ಇಲ್ಲ. ದಯವಿಟ್ಟು ನಾಳೆ ನನಗೆ ಉತ್ತರ ತರಿಸಿಕೊಡಿ.

ಅಧ್ಯಕ್ಷರು: ಸರ್ಕಾರದವರು ಹತ್ತು ದಿವಸ ಸಮಯ ಕೇಳಿದ್ದಾರೆ. ನಾಳೆ ಹೇಗೆ ನಾನು ತರಿಸಿಕೊಡಲಿ?

(ಗೊಂದಲ)

ರಾಜ್ಯದಲ್ಲಿ ವೈದ್ಯರ ಮತ್ತು ವೇದ್ಯಕೀಯೇತರ ನೇಮಕಾತಿ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 26(118)

ಸದಸ್ಯರ ಹೆಸರು: ಶ್ರೀ ಸದಾನಂದಗೌಡ ಡಿ.ವಿ.(ಪುತ್ತೂರು)

ಉತ್ತರಿಸುವ ಸಚಿವರು: ಡಾ।। ಎ.ಬಿ.ಮಾಲಕರೆಡ್ಡಿ(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಪ್ರಶ್ನೆ

ಅ) ರಾಜ್ಯದಲ್ಲಿ ವಿವಿಧ ಸರ್ಕಾರಿ ಆಸ್ಪತ್ರೆಗಳಲ್ಲಿ ಖಾಲಿ ಇರುವ ವೈದ್ಯರ ಮತ್ತು

ವೈದ್ಯಕೀಯೇತರ ನೌಕರರ ಹುದ್ದೆಗಳೆಷ್ಟು?

ಅ) ಈ ಹುದ್ದೆಗಳು ಎಷ್ಟು ವರ್ಷಗಳಿಂದ ಖಾಲಿ ಇವೆ; ಅವುಗಳನ್ನು ತುಂಬದೆ ಇರಲು ಕಾರಣಗಳೇನು?

ಇ) ಇ ಗ್ರೂಪ್ ಹುದ್ದೆಯ ನೌಕರ ನೇಮಕಾತಿಯಾಗದೆ ಮರಣೋತ್ತರ ಶವ ಪರೀಕ್ಷೆಗೂ ಕೂಡಾ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗಿದ್ದಲ್ಲಿ ಈ ನಿಟ್ಟಿನಲ್ಲಿ ಕೈಗೊಂಡ ಕ್ರಮಗಳೇನು?

ಉತ್ತರ

ಅ) ವೈದ್ಯರು -- 573

ವೈದ್ಯಕೀಯೇತರ ಸಿಬ್ಬಂದಿ -- 14,870

ಅ) ನಿವೃತ್ತಿಯಿಂದ ಖಾಲಿಯಾದ ವೈದ್ಯರ ಹುದ್ದೆಗಳು ಸುಮಾರು 6 ತಿಂಗಳಿನಿಂದ 2 ವರ್ಷದ ಅವಧಿಯೊಳಗಿರುತ್ತವೆ. ಖಾಲಿ ಇರುವ ವೈದ್ಯರ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ತುಂಬುವ ಪ್ರಕ್ರಿಯೆಯಲ್ಲಿ 550 ವೈದ್ಯರ ಮತ್ತು 80 ದಂತ ವೈದ್ಯರ ತಾತ್ಕಾಲಿಕ ಆಯ್ಕೆ ಪಟ್ಟಿ ಪ್ರಕಟಿಸಿದ್ದು ಅಂತಿಮ ಪಟ್ಟಿಯನ್ನು ಪ್ರಕಟಿಸಿ ನೇಮಕಾತಿ ಮಾಡಲಾಗುತ್ತಿದೆ. ಅಲ್ಲದೆ ತಾಲ್ಲೂಕು ಆಸ್ಪತ್ರೆಗಳಲ್ಲಿ ಖಾಲಿ ಇರುವ ತಜ್ಞ ವೈದ್ಯರ ಹುದ್ದೆಗಳನ್ನು ಗುತ್ತಿಗೆ ಆಧಾರದ ಮೇಲೆ ತುಂಬಲು ಜಿಲ್ಲಾಧಿಕಾರಿಗಳಿಗೆ ಅಧಿಕಾರ ನೀಡಲಾಗಿದೆ. ವೈದ್ಯಕೀಯೇತರ ಹುದ್ದೆಗಳು 3-4 ವರ್ಷಗಳಿಂದ ಖಾಲಿ ಇವೆ. 6000 ಹುದ್ದೆಗಳನ್ನು ತುಂಬಲು ವಿಶೇಷ ನೇಮಕಾತಿ ನಿಯಮಗಳನ್ನು ರೂಪಿಸುವ ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆ.

ಇ) ಇಲ್ಲ

ಶ್ರೀ ಡಿ.ವಿ.ಸದಾನಂದಗೌಡ: ಮಾನ್ಯ ಅಧ್ಯಕ್ಷರೆ, ನಾನು ಒಂದೇ ಪ್ರಶ್ನೆಯನ್ನು ಮಾನ್ಯ ಆರೋಗ್ಯ ಮಂತ್ರಿಗಳನ್ನು ಕೇಳುವುದಕ್ಕೆ ಇಷ್ಟಪಡುತ್ತೇನೆ. ನಾನು ಕೇಳಿದ ಮೊದಲನೆ ಪ್ರಶ್ನೆಗೆ 573 ವೈದ್ಯರು ಹಾಗೂ 14,870 ವೈದ್ಯಕೀಯೇತರ ಸಿಬ್ಬಂದಿ ಖಾಲಿಯಿದೆಯೆಂದು ಹೇಳಿದ್ದಾರೆ. ಅದಕ್ಕೆ ಮಾನ್ಯ ಮಂತ್ರಿಗಳು ಹೇಳಬೇಕು, ಇಷ್ಟು ಹುದ್ದೆ ಖಾಲಿ ಇಟ್ಟುಕೊಂಡು 5-6 ವರ್ಷಗಳಿಂದ ನೀವು ಆಸ್ಪತ್ರೆಗಳಲ್ಲಿ ಕೆಲಸ ಕಾರ್ಯಗಳನ್ನು ಹೇಗೆ ನಿಭಾಯಿಸುತ್ತಿದ್ದೀರಿ ಎನ್ನುವುದರ ಬಗ್ಗೆ ಪ್ರಥಮವಾಗಿ ಹೇಳಬೇಕು. ಇನ್ನು

ಎರಡನೆಯದಾಗಿ ಈಗ ಆಯ್ಕೆ ಪಟ್ಟಿ ಪ್ರಕಟ ಮಾಡಿದ್ದೇವೆಂದು ಹೇಳಿದ್ದೀರಿ, ಕಳೆದ ಸದನದಲ್ಲಿ ಕೂಡ ಆಯ್ಕೆ ಪಟ್ಟಿ ತಯಾರು ಮಾಡಲಾಗಿದೆ ಎಂದು ಹೇಳಿದ್ದು ನನ್ನ ಗಮನಕ್ಕೆ ಬಂದಿದೆ. ಆ ಆಯ್ಕೆ ಪಟ್ಟಿ ಬರೇ ಪಟ್ಟಿಯಾಗಿಯೇ ಉಳಿದಿದೆಯೇ ಅಥವಾ ಆಯ್ಕೆ ಪಟ್ಟಿಯಲ್ಲಿರುವವರನ್ನು ಪೋಸ್ಟಿಂಗ್ ಮಾಡುವಂತಹ ಕೆಲಸವನ್ನು ಮಾಡುತ್ತೀರಾ? ಅದನ್ನು ಯಾವಾಗ ಮಾಡುತ್ತೀರಿ? ಇನ್ನು ಮೂರನೆಯದಾಗಿ ಜಿಲ್ಲಾಧಿಕಾರಿಗಳ ಮುಖಾಂತರ ಈತನಕ ಎಷ್ಟು ತಜ್ಞ ವೈದ್ಯಾಧಿಕಾರಿಗಳನ್ನು ನೇಮಕಾತಿ ಮಾಡಿದ್ದೀರಿ? ಏಕೆಂದರೆ ಜಿಲ್ಲಾಧಿಕಾರಿಗಳ ಮುಖಾಂತರ ನಾವು ಮಾಡುತ್ತೇವೆಂದು ಹೇಳುವಂತಹ ಮಾತನ್ನು ಹೇಳುತ್ತಿದ್ದೀರಿ. ಇಷ್ಟರತನಕ ಎಲ್ಲಿಯೂ ಕೂಡ ತಜ್ಞ ವೈದ್ಯರ ನೇಮಕಾತಿ ಜಿಲ್ಲಾಧಿಕಾರಿಗಳ ಮುಖಾಂತರ ಆಗಿಯೇ ಇಲ್ಲ. ಏಕೆ ಇದು ಕೇವಲ ಘೋಷಣೆಯಾಗಿಯೇ ಉಳಿಯುತ್ತದೆ? ಎಂದು ಹೇಳಬೇಕು.

ಡಾ: ಎ.ಬಿ. ಮಾಲಕರೆಡ್ಡಿ: ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು, ಈ ಇಲಾಖೆಯಲ್ಲಿ ಇಷ್ಟು ಸಿಬ್ಬಂದಿ ಕೊರತೆ ಇಟ್ಟುಕೊಂಡು ಹೇಗೆ ನಡೆಸುತ್ತಿದ್ದಾರೆಂದು ಕೇಳಿದರು. ಇದು ಈಗ ಆದಂತಹ ಸಮಸ್ಯೆ ಅಲ್ಲ. ಮಾನ್ಯ ಗೋಪಾಲ ಪೂಜಾರಿ ಅವರ ಪ್ರಶ್ನೆಗೆ ಉತ್ತರವನ್ನು ಹೇಳಿದೆ. 1988ನೇ ಇಸವಿಯಿಂದ ನೇಮಕಾತಿ ಮಾಡಿರಲಿಲ್ಲ. ಈ ಸರ್ಕಾರ ಬಂದಮೇಲೆ ಗುತ್ತಿಗೆ ಆಧಾರದ ಮೇಲೆ 1990-91ನೇ ಇಸವಿಯಿಂದ ಮಾಡುತ್ತಿದ್ದೇವೆ. ಈ ಸರ್ಕಾರ ಬಂದ ಮೇಲೆ ವೈದ್ಯಕೀಯೇತರ ಸಿಬ್ಬಂದಿಗಳಾದ ಟೆಕ್ನಿಷಿಯನ್, ರೇಡಿಯೋಗ್ರಾಫರ್ಸ್, ರೇಡಿಯೋ ಟೆಕ್ನಿಷಿಯನ್ ಹಾಗೂ ಡ್ರೈವರ್ಸ್ ಇವರುಗಳನ್ನು ನಾವು ಅಪಾಯಿಂಟ್ ಮಾಡಿದ್ದೇವೆ. ಹಂತ ಹಂತವಾಗಿ ಸುಮಾರು 850 ಟೆಕ್ನಿಷಿಯನ್‌ಗಳನ್ನು ಅಪಾಯಿಂಟ್ ಮಾಡಿದ್ದೇವೆ. ಆದರೂ ಕೂಡ ಇನ್ನೂ ಕೊರತೆ ಇದೆ. ಹೀಗೆ ಈಗ ತಾಲ್ಲೂಕು ಮಟ್ಟದಲ್ಲಿ ತಜ್ಞ ವೈದ್ಯರ ಕೊರತೆ ಇದ್ದಾಗ ಜಿಲ್ಲಾಧಿಕಾರಿಗಳಿಗೆ ನಾವು ಅಧಿಕಾರ ಕೊಟ್ಟಿದ್ದೇವೆ. ಯಾರಾದರೂ ಪ್ರೈವೇಟ್ ಪ್ರಾಕ್ಟಿಷನರ್ ಪೋಸ್ಟ್ ಗ್ರಾಜುಯೇಟ್ ಬಂದಿದ್ದಾದರೆ ಅವರನ್ನೂ ಕೂಡ ತಾತ್ಕಾಲಿಕವಾಗಿ ತಾವು ನೇಮಕಾತಿ ಮಾಡಬಹುದು, ಇದರಿಂದ ಸಾಕಷ್ಟು ಸೇವೆಯನ್ನು ಜನರಿಗೆ ಕೊಡಬಹುದು. ನಾವು ಈಗಾಗಲೇ 550 ವೈದ್ಯರ ಆಯ್ಕೆ ಪಟ್ಟಿಯನ್ನು ಪ್ರಕಟ ಮಾಡಿದ್ದೇವೆ. ಆದರೆ ಅದರ ತೊಂದರೆ ಏನು ಬರುತ್ತದೆಯೆಂದರೆ ಜಿಲ್ಲಾಧಿಕಾರಿಗಳು ಸರ್ಟಿಫಿಕೇಟ್‌ಗಳನ್ನು ವ್ಯಾಲಿಡೇಷನ್ ಮಾಡಿ ಕಳುಹಿಸಬೇಕಾಗುತ್ತದೆ. ಅದಕ್ಕೆ ಒಂದು ಕಮಿಟಿ ಇದೆ. ಗ್ರಾಮಾಂತರ ಪ್ರದೇಶಕ್ಕೆ ಹೋಗಿ ನಿಜವಾದ ಕ್ಯಾಸ್ಟ್ ಸರ್ಟಿಫಿಕೇಟ್ ತೆಗೆದುಕೊಂಡಿದ್ದಾರೆಯೋ ಇಲ್ಲವೋ ಎಂದು ತಿಳಿದುಕೊಂಡು ಅದರ ದೃಢೀಕರಣವನ್ನು ಮಾಡಬೇಕಾಗುತ್ತದೆ. ಆಗ ಮಾತ್ರ ನೇಮಕಾತಿ ಆಗುತ್ತದೆ.

(ಮುಂದಿದೆ)

ಅಧ್ಯಕ್ಷರು: ಇದು ಬಹಳ ಮುಖ್ಯವಾದ ವಿಚಾರ ಎಂದು ಗೊತ್ತಿದೆ, ಆದರೆ ಚರ್ಚೆ ಮಾಡುವುದಕ್ಕೆ ನಮಗೆ ಸಮಯ ಇಲ್ಲವಲ್ಲಾ.

ಶ್ರೀ ಎನ್.ಚಲುವರಾಯಸ್ವಾಮಿ: ಸರ್ಕಾರಕ್ಕೆ ಪ್ರಶ್ನೆ ಕಳುಹಿಸುವುದು ಮುಖ್ಯವಲ್ಲ, ಇದು ರಾಜ್ಯದಲ್ಲಿರುವ ಸಮಸ್ಯೆ.

ಅಧ್ಯಕ್ಷರು: ಹಾಗಾದರೆ ಒಂದು ಕೆಲಸ ಮಾಡೋಣ. ಯಾರಾದರೂ ಒಂದು ರೆಸಲ್ಯೂಷನ್ ತನ್ನಿ ಕ್ವೊಶ್ಚನ್ ಅವರ್ ಎರಡು ಗಂಟೆ ಮಾಡೋಣವೆಂದು ಇಟ್ಟುಕೊಳ್ಳೋಣ, ನೀವು ಯಾರಾದರೂ ರೆಸಲ್ಯೂಷನ್ ತಂದರೆ ನಾಳೇನೆ ಅಡಾಪ್ಟ್ ಮಾಡೋಣ.

ಶ್ರೀ ಅರಗ ಜ್ಞಾನೇಂದ್ರ: ನಾವು ಪ್ರಶ್ನೆಗಳನ್ನು ಕಳುಹಿಸಿದರೆ, ಅವುಗಳು ಅನ್‌ಸ್ಟಾರ್ಡ್ ಆಗುತ್ತದೆ, ಕ್ವೊಶ್ಚನ್ ಇಲ್ಲಿಗೆ ಬರುವುದೇ ಇಲ್ಲ. ಈಗ ಇಲ್ಲಿ ನಾವು ಉಪಪ್ರಶ್ನೆಗಳನ್ನು ಕೇಳದೆ ಇದ್ದರೆ ಹೇಗೆ? ಇಂತಹ ಮುಖ್ಯವಾದ ಇಶ್ಯೂಗಳನ್ನು ನಾವು ಎಲ್ಲಿ ಎತ್ತಬೇಕು ಹೇಳಿ?

ಅಧ್ಯಕ್ಷರು: ಇಲ್ಲಿ ನಾವು ನಿಯಮಾವಳಿ ಪ್ರಕಾರ ನಡೆಯಬೇಕು ಎಂದು ತಾನೇ ಇರುವುದು?

ಶ್ರೀ ಅರಗ ಜ್ಞಾನೇಂದ್ರ: ತಮ್ಮ ಕಷ್ಟ ನಮಗೆ ಅರ್ಥವಾಗುತ್ತದೆ. ಆದರೆ ಇಂತಹ ಪ್ರಶ್ನೆಗೆ ಸ್ವಲ್ಪ ಅವಕಾಶ ಕೊಡಬೇಕು.

ಅಧ್ಯಕ್ಷರು: ಇಂತಹ ಹತ್ತು ಪ್ರಶ್ನೆ ಹಾಕಿ ಎರಡು ಗಂಟೆ ಮಾಡೋಣ. ಅದಕ್ಕೆ ಲೆಕ್ಕಾಚಾರ ಬೇಡವೇ?

ಡಾ: ಎ.ಬಿ.ಮಾಲಕರೆಡ್ಡಿ: ಈಗ ಚರ್ಚೆ ಮಾಡತಕ್ಕಂಥ ಅವಶ್ಯಕತೆ ಇಲ್ಲ.

ಶ್ರೀ ಎನ್.ಚಲುವರಾಯಸ್ವಾಮಿ: ಚರ್ಚೆ ಮಾಡುವಂತಹ ಅವಶ್ಯಕತೆ ಇಲ್ಲವೆಂದು ಮಾನ್ಯ ಮಂತ್ರಿಗಳು ಹೇಳುತ್ತಿದ್ದಾರೆ. ಹಾಗಾದರೆ ತಾವು ಯಾವ ಡಿ.ಸಿ.ಗೆ ಹೇಳಿದ್ದೀರಿ? ಯಾವ ಡಿ.ಸಿ. ಅಪಾಯಿಂಟ್‌ಮೆಂಟ್ ಮಾಡಿದ್ದಾರೆ ಹೇಳಿ? ಎ.ಎನ್.ಎಂ. ಇಲ್ಲ, ಡಾಕ್ಟರ್ಸ್ ಇಲ್ಲ. ಯಾವ ಜಿಲ್ಲೆಯಲ್ಲಿ ನಿಮ್ಮ ಸರ್ಕಾರದ ಆದೇಶದಂತೆ ಅಪಾಯಿಂಟ್‌ಮೆಂಟ್ ಮಾಡಿದ್ದಾರೆ ಹೇಳಿ.

ಶ್ರೀ ಅರಗ ಜ್ಞಾನೇಂದ್ರ: ಡಿ.ಸಿ. ಅಪಾಯಿಂಟ್‌ಮೆಂಟ್ ನಿಲ್ಲಿಸಿದ್ದಾರೆ, ಸ್ಟೇ ಮಾಡಿದ್ದಾರೆ.

ಅಧ್ಯಕ್ಷರು: ಎಲ್ಲರೂ ಕೇಳಿ, 20 ಜನ ಬೇಕಾದರೂ ಕೇಳಿ, ನನ್ನದೇನೂ

ಅಭ್ಯಂತರವಿಲ್ಲ.

ಶ್ರೀ ಅರಗಜ್ಞಾನೇಂದ್ರ: ಈ ರೀತಿ ಬೇಜಾರು ಮಾಡಿಕೊಂಡರೆ ಹೇಗೆ?

ಅಧ್ಯಕ್ಷರು: ಬೇಜಾರು ಪ್ರಶ್ನೆ ಅಲ್ಲ. ನೀವೇ ಹೇಳುತ್ತೀರಿ ರೂಲ್ಸ್ ಪ್ರಕಾರ ನಡೆಯಿರಿ ಎಂದು.

ಶ್ರೀ ಅರಗ ಜ್ಞಾನೇಂದ್ರ: ನಾವು ಜನರ ಭಾವನೆಯನ್ನು ಇಲ್ಲಿ ಹೇಳುತ್ತಾ ಇದ್ದೇವೆ.

ಅಧ್ಯಕ್ಷರು: ಈ ಪ್ರಶ್ನೆಗಳು ಲ್ಯಾಪ್ಸ್ ಆಗುವುದಿಲ್ಲ, ಇನ್ನೂ ಮೂರುನಾಲ್ಕು ಪ್ರಶ್ನೆಗಳು ಇವೆ, ಅವುಗಳನ್ನು ಮುಂದಿನ ವಾರ ತೆಗೆದುಕೊಳ್ಳೋಣವೆಂದು ಹೇಳುತ್ತಿದ್ದೇನೆ. ಅದನ್ನು ನೀವು ಕೇಳುತ್ತಿಲ್ಲವಲ್ಲಾ?

ಡಾ:ಎ.ಬಿ.ಮಾಲಕ ರೆಡ್ಡಿ: ಮಾನ್ಯ ಅಧ್ಯಕ್ಷರೇ, ಎಲ್ಲಾ ಸದಸ್ಯರು ಸ್ಪಷ್ಟೀಕರಣ ಕೇಳುವಂಥಾದ್ದು ಆಗಿದೆ, ಈಗ ನಾನು ಹೇಳುವಂಥಾದ್ದು ಏನು ಎಂದರೆ ಈಗ 1988ನೇ ಇಸವಿಯಿಂದ ಈ ಎಲ್ಲಾ ವೇಕೆನ್ಸಿಗಳು ಕ್ರಿಯೇಟ್ ಆಗಿವೆ. ಈಗ ನಾವು ಈ ಹುದ್ದೆಗಳನ್ನು ಹಂತ ಹಂತವಾಗಿ ತುಂಬುತ್ತಿದ್ದೇವೆ. ಇದನ್ನು ನಾವು ರೆಗ್ಯುಲರ್ ಆಗಿ ಅಲ್ಲದೇ ತಾತ್ಕಾಲಿಕವಾಗಿಯೂ ಗುತ್ತಿಗೆ ಆಧಾರದ ಮೇಲೂ ಕೂಡ ನಾವು ಹುದ್ದೆಗಳನ್ನು ಭರ್ತಿ ಮಾಡುತ್ತಿದ್ದೇವೆ, ಏಕೆಂದರೆ ಯಾರಿಗೂ ತೊಂದರೆಯಾಗಬಾರದೆಂದು ಈ ಕೆಲಸವನ್ನು ಸಹ ಮಾಡುತ್ತಿದ್ದೇವೆ. ಈಗ ಇಲ್ಲಿ ಸ್ವಲ್ಪ ಸಮಸ್ಯೆಯಾಗಿದೆ, ಏನೆಂದರೆ ಇದೇ ಸದನದಲ್ಲಿ ಖೋಟಾ ಸರ್ಟಿಫಿಕೇಟ್‌ಗಳನ್ನು ಕೊಟ್ಟು ಅನೇಕ ಜನರನ್ನು ನೇಮಕಾತಿ ಮಾಡಲಾಗಿದೆಯೆಂದು ಚರ್ಚೆಯಾದ ಮೇಲೆ ನಿಮ್ಮ ಸರ್ಕಾರವೇ ವ್ಯಾಲಿಡೇಶನ್ ಆಕ್ಟ್ ಅನ್ನು ಪಾಸ್ ಮಾಡಿದರು. ಈ ಆಕ್ಟ್ ಪ್ರಕಾರ ಜಿಲ್ಲಾಧಿಕಾರಿಯೇ ಅಧ್ಯಕ್ಷರಾಗಿರುತ್ತಾರೆ, ಇವರೇ ಸರ್ಟಿಫಿಕೇಟ್ ಅನ್ನು ಧೃಡೀಕರಣ ಮಾಡುವಂಥಾದ್ದು, ಇದಕ್ಕೆ ಸೋಶಿಯಲ್ ವೆಲ್‌ಫೇರ್ ಆಫೀಸರ್ಸ್ ಹಾಗೂ ಬ್ಯಾಕ್‌ವರ್ಡ್ ಕ್ಲಾಸ್ ಇಲಾಖೆ ಆಫೀಸರ್ಸ್ ಈ ಕಮಿಟಿಯ ಮೆಂಬರ್ಸ್ ಆಗಿರುತ್ತಾರೆ. ಇಲ್ಲಿ ಯಾರು ಸರ್ಟಿಫಿಕೇಟ್‌ಗಳನ್ನು ಕೊಟ್ಟಿರುತ್ತಾರೋ, ಅವರ ಹಳ್ಳಿಗೆ ಹೋಗಿ ಅಲ್ಲಿ ಅದನ್ನು ವೆರಿಫೈ ಮಾಡಬೇಕಾಗುತ್ತದೆ. ಈ ರೀತಿಯಿಂದಾಗಿ ಹುದ್ದೆಗಳನ್ನು ಭರ್ತಿ ಮಾಡುವಂಥಾದ್ದಕ್ಕೆ ಡಿಲೇ ಆಗುತ್ತಿದೆ. once again ವಾಲಿಡೇಶನ್ ಆಕ್ಟ್ ಅನ್ನು ರೀಪಿಲ್ ಮಾಡಿ ತತ್ ಕ್ಷಣ ಮಾಡುವುದಕ್ಕೆ ಆಗುತ್ತದೆ. ಆ ರೀತಿ ಮಾಡುವುದಕ್ಕೆ ಆಗುವುದಿಲ್ಲವೆಂದು ಏನು ಇಲ್ಲ.

ಶ್ರೀ ಎಸ್.ಎಸ್.ಪಾಟೀಲ್: ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಈ ಎಲ್ಲಾ ವೆರಿಫಿಕೇಶನ್ ಆಗುವವರೆಗೆ ರೋಗಿಗಳಿಗೆ ಬರಬೇಡವೆಂದು ಹೇಳಬೇಕಾಗುತ್ತದೆ. ನಾವು ಇಲ್ಲಿ ವ್ಯವಹಾರಿಕವಾಗಿಯೂ ನೋಡಬೇಕಾಗುತ್ತದೆ. ನೀವು ಆಸ್ಪತ್ರೆಗಳನ್ನು

ಹಳ್ಳಿಗಳಲ್ಲಿ ತೆಗೆದಿದ್ದೀರಿ, ಅಲ್ಲಿ ಡಾಕ್ಟರ್ ಇಲ್ಲ, ದಾದಿಗಳು ಇಲ್ಲ, ಗುಮಾಸ್ತರು ಇಲ್ಲ, ಕಾಂಪೌಂಡರ್ಸ್ ಇಲ್ಲ, ಈ ರೀತಿಯಾದರೆ ಇವು ಏಕೆ ಇರಬೇಕು? ಇನ್ನು ದುರ್ದೈವದ ಸಂಗತಿ ಏನೆಂದರೆ ಇವರು ಇಲ್ಲಿಂದ ಒಬ್ಬ ಡಾಕ್ಟರ್ ಅನ್ನು ಹಳ್ಳಿಗೆ ಹಾಕುತ್ತಾರೆ, ಇವರನ್ನು ಮೂರು ತಿಂಗಳಲ್ಲಿ ವರ್ಗ ಮಾಡುತ್ತಾರೆ. ನೀವು ಇವರನ್ನು ಕೆಲಸಕ್ಕೆ ನೇಮಕ ಮಾಡುವುದು, ಮತ್ತೆ ಇಲ್ಲಿ ಕುಳಿತುಕೊಂಡು ಅವರನ್ನು ವರ್ಗ ಮಾಡುವುದು.

ಡಾ:ಎ.ಬಿ.ಮಾಲಕರೆಡ್ಡಿ: ಮಾನ್ಯ ಅಧ್ಯಕ್ಷರೇ, ಈ ಕಾನೂನನ್ನು ನಾವೇ ಮಾಡಿದ್ದೇವೆಂದ ಮೇಲೆ ನಾವೇ ಈ ಸಮಸ್ಯೆಯನ್ನು ಬಗೆಹರಿಸಬೇಕಲ್ಲವೇ? ನಾವು ಮತ್ತೆ ಆ ಆಕ್ಟ್ ಅನ್ನು ರಿಪೀಲ್ ಮಾಡುವುದಕ್ಕೆ ಬರುತ್ತದೆ. ಈಗ ಆಯ್ಕೆಯಾಗಿ ಮೂರು ತಿಂಗಳಾಯಿತು, ಈ ಪಟ್ಟಿಯ ವ್ಯಾಲಿಡೇಶನ್ ಆಗಿ ಬರುತ್ತಾ ಇಲ್ಲ, ಈಗ ಇದನ್ನು ನಿಂದನೆ ಮಾಡುವುದಕ್ಕೆ ಆಗುವುದಿಲ್ಲ ಆ ಕಾರಣದಿಂದ ಈ ಸಮಸ್ಯೆಯನ್ನು ನಾವೇ ಬಗೆಹರಿಸಬೇಕು, ಈ ಸದನವೇ ಇದನ್ನು ಬಗೆಹರಿಸಬೇಕು, ತಾವು ಅದನ್ನು ಹೇಳಬೇಕು.

(ಗೊಂದಲ)

ಅಧ್ಯಕ್ಷರು: ಮೂರು-ನಾಲ್ಕು ಸದಸ್ಯರು ಒಟ್ಟಿಗೆ ಮಾತನಾಡಿದರೆ ಅದು ರೆಕಾರ್ಡ್‌ಗೆ ಹೋಗುವುದಿಲ್ಲ. ನಾನು ಯಾರನ್ನು ಪರ್ಮಿಟ್ ಮಾಡುತ್ತೇನೆ, ಅವರ ಭಾಷಣವನ್ನು ಮಾತ್ರ ರೆಕಾರ್ಡ್ ಮಾಡಿ.

ಶ್ರೀ ಅರಗ ಜ್ಞಾನೇಂದ್ರ(ತೀರ್ಥಹಳ್ಳಿ): ಮಾನ್ಯ ಅಧ್ಯಕ್ಷರೇ, ಈಗ ಜಿಲ್ಲಾ ಮಟ್ಟದಲ್ಲಿ ಒಂದೊಂದು ವಿಷಯಕ್ಕೂ ಒಬ್ಬೊಬ್ಬ ವೈದ್ಯರು ಇದ್ದಾರೆ, ಆದರೆ ತಾಲ್ಲೂಕು ಕೇಂದ್ರಗಳಲ್ಲಿ ಕೆಹೆಚ್‌ಡಿಪಿಯಿಂದ ದೊಡ್ಡ ದೊಡ್ಡ ಆಸ್ಪತ್ರೆಗಳನ್ನು ಕಟ್ಟಿದ್ದೀರಿ, ಅಲ್ಲಿ ರೋಗಿಗಳು ಹೋದರೆ ಇಂತಹ ವೈದ್ಯರು ಯಾರೂ ಇಲ್ಲ ಈಗ ಅವರ ಸರ್ಟಿಫಿಕೇಟ್‌ಗಳನ್ನು ವೆರಿಫಿಕೇಷನ್ ಮಾಡುವಂತಹ ಆದೇಶ ನಿಮ್ಮ ಸರ್ಕಾರದ ಕೈಯಲ್ಲಿ ಇದೆ. ನೀವು ಜಿಲ್ಲಾಧಿಕಾರಿಗಳಿಗೆ 15 ದಿವಸಗಳಲ್ಲಿ ವೆರಿಫಿಕೇಶನ್ ಮಾಡಿ ಕಳುಹಿಸಿ ಎಂದು ಹೇಳಬೇಕು. ಇದನ್ನು ಮೂರು ತಿಂಗಳು, ನಾಲ್ಕು ತಿಂಗಳುಗಳು ಪೋಲಿಸ್ ಎನ್‌ಕ್ವಾಯರಿ ಮತ್ತೆ ಜಿಲ್ಲಾಧಿಕಾರಿಗಳ ಎನ್‌ಕ್ವಾಯರಿ ಎಂದು ಏಕೆ ಪೆಂಡಿಂಗ್‌ನಲ್ಲಿ ಇಟ್ಟುಕೊಂಡಿದ್ದೀರಿ? ಈ ರೀತಿ ಆರು ತಿಂಗಳುಗಳಾದರೂ ಪೆಂಡಿಂಗ್ ಇಟ್ಟುಕೊಂಡರೆ ಖಾಯಿಲೆ ನಿಲ್ಲುತ್ತದೆಯೇ? ನೀವು ಡಾಕ್ಟರ್‌ಗಳನ್ನು ಕೊಡುವವರೆಗೂ ಅವರು ಇರುತ್ತಾರಾ? ಅವರು ಸತ್ತು ಹೋಗುತ್ತಾರೆ. ಹೆರಿಗೆ ಆಗತಕ್ಕ ಜನ ಬೀದಿ ಮೇಲೆ ಹೆರಿಗೆ ಆಗುತ್ತಿದ್ದಾರೆ. ಈ ರೀತಿಯಾದರೆ ಇದು ನಿಮಗೆ ಭೂಷಣವಾಗುತ್ತದೆಯೇ? ನಿಮ್ಮ ಸರ್ಕಾರಕ್ಕೆ ಗೌರವವನ್ನು ತರುತ್ತದೆಯೇ? ತಾವು ತಕ್ಷಣ ಈ ಹುದ್ದೆಗಳಿಗೆ ಅಪಾಯಿಂಟ್‌ಮೆಂಟ್ ಆರ್ಡರ್ ಅನ್ನು ಕೊಡಬೇಕು. ನೀವೂ ನಮ್ಮ ಹಾಗೆ ಕೈ ಚೆಲ್ಲಿ

ಬಿಟ್ಟರೆ ಹೇಗೆ ಆಗುತ್ತದೆ? ಇದರ ಬಗ್ಗೆ ನೀವು ಆದೇಶವನ್ನು ಕೊಡಬೇಕು, ಇದರ ಬಗ್ಗೆ ತಾವು ಏನು ಕ್ರಮ ತೆಗೆದುಕೊಳ್ಳುತ್ತೀರೆಂಬುದನ್ನು ಹೇಳಿ.

ಡಾ: ಎ.ಬಿ.ಮಾಲಕರೆಡ್ಡಿ: ನಾವೂ ಕೂಡ ಜಿಲ್ಲಾಧಿಕಾರಿಗಳೊಡನೆ ಸಮಾಲೋಚನೆ ಮಾಡಿದ್ದೇವೆ, ಇದಕ್ಕೆ ಅವರು ಏನು ಹೇಳುತ್ತಾರೆಂದರೆ ಸರ್ಕಾರಿ ಅಧಿಕಾರಿಗಳು ಅಭ್ಯರ್ಥಿಗಳನ್ನು ವೆರಿಫೈ ಮಾಡಲು ಹೋದಂತಹ ಸಂದರ್ಭದಲ್ಲಿ ಅವರ ಮನೆಗಳು ಬೀಗ ಹಾಕಿರುತ್ತಾರೆ, ಹೀಗಾಗಿ ಆ ವ್ಯಕ್ತಿಗಳು ಸಿಗದೇ ಡಿಲೇ ಆಗುತ್ತದೆ.

ಡಾಕ್ಟರ್‌ಗಳು, ನರ್ಸ್‌ಗಳು ಬಂದಿಲ್ಲವೆಂದು ಸದಸ್ಯರು ಹೇಳಿದರು. ಇದಕ್ಕಾಗಿಯೇ ಈಗ ಪ್ಯಾರಾ ಮೆಡಿಕಲ್ ಸ್ಟಾಫ್ ಈ ಸಿಬ್ಬಂದಿಗಳೂ ಕೂಡ ಇಲ್ಲದೆ, ಸುಮಾರು ಆರು ಸಾವಿರ ಜನರ ಕೊರತೆ ಇದೆ, ಇವರನ್ನು ನೇಮಕ ಮಾಡಬೇಕಾದರೆ ಈಗಿನ ಪದ್ಧತಿಯ ಪ್ರಕಾರ ಸುಮಾರು ನಾವು 60 ಸಾವಿರ ಅಭ್ಯರ್ಥಿಗಳನ್ನು ನಾವು ಇಂಟರ್‌ವ್ಯೂಗೆ ಕರೆಯಬೇಕಾಗುತ್ತದೆ. ಇದನ್ನು ಕಡಿಮೆ ಮಾಡಬೇಕಾದರೆ ನಾವು ಹೊಸ ವಿಶೇಷ ನೇಮಕಾತಿಯ ನಿಯಮಗಳನ್ನು ರೂಪಿಸಿದ್ದೇವೆ. ಇದು ಮುಂದಿನ ವಾರ ನಮ್ಮ ಸಚಿವ ಸಂಪುಟದ ಸಭೆಯಲ್ಲಿ ಪ್ರಸ್ತಾಪಕ್ಕೆ ಬರುತ್ತದೆ, ಇದಕ್ಕೆ ಡಿಪಿಎಆರ್‌ನ ಪರ್ಮಿಷನ್ ಬೇಕು, ನಾವು ಯಾವುದಾದರೂ ಹೊಸ ನೇಮಕಾತಿಯನ್ನು ಮಾಡಬೇಕೆಂದರೆ ಇವರ ಪರ್ಮಿಶನ್ ಬೇಕಾಗುತ್ತದೆ. ಇದನ್ನು ಅವರು ಲಾ-ಡಿಪಾರ್ಟ್‌ಮೆಂಟ್‌ಗೆ ಕಳುಹಿಸಿದರು, ಇದನ್ನು ಅವರು ಕ್ಲಿಯರ್ ಮಾಡಿ ಈಗ ಡಿಪಿಎಆರ್‌ಗೆ ಬಂದು, ನಮಗೆ ಈಗ ಬಂದಿದೆ. ಈಗ ನಮ್ಮ ಇಲಾಖೆಯಿಂದ ಮುಂದಿನ ಕ್ಯಾಬಿನೆಟ್ ಮೀಟಿಂಗ್‌ನಲ್ಲಿ ಇದು ಅಜೆಂಡಾನಲ್ಲೂ ಇದೆ, ಇದಕ್ಕೆ ಸಚಿವ ಸಂಪುಟದಲ್ಲಿ ಮಂಜೂರಾತಿಯನ್ನು ತೆಗೆದುಕೊಂಡು, ಮತ್ತೆ ಇದನ್ನು ಗೆಜೆಟ್‌ನಲ್ಲಿ ಪಬ್ಲಿಷ್ ಮಾಡಬೇಕು. ಅಬ್ಜಕ್ಷನ್ ಕಾಲ್‌ಫಾರ್ ಮಾಡಬೇಕಾಗುತ್ತದೆ, ಒಂದು ತಿಂಗಳು ಬೇಕಾಗುತ್ತದೆ. ಇದಾದ ಮೇಲೆ ಇದರ ಪ್ರಕ್ರಿಯೆ ಪ್ರಾರಂಭ ಆಗುತ್ತದೆ. ನಾವು ಇದನ್ನು ಮೆರಿಟ್ ಮೇಲೆ ಭರ್ತಿ ಮಾಡುವಂತಹ ಒಂದು ನಿಯಮವನ್ನು ಹಾಕಿಕೊಂಡಿದ್ದೇವೆ. ಇದನ್ನು ನಾವು ಕಂಪ್ಯೂಟರ್ ಮೂಲಕ ಮಾರ್ಚ್ ಅಥವಾ ಏಪ್ರಿಲ್ ತಿಂಗಳಲ್ಲಿ ಈ ಪ್ರಕ್ರಿಯೆ ಪ್ರಾರಂಭವಾಗುತ್ತದೆ. ಇದರಿಂದ ಒಟ್ಟು ಆರು ಸಾವಿರ ಅಭ್ಯರ್ಥಿಗಳ ಲಭ್ಯತೆ ಇದೆ.

ಶ್ರೀ ಕರಡಿ ಸಂಗಣ್ಣ ಅಮರಪ್ಪ: ಮಾನ್ಯ ಅಧ್ಯಕ್ಷರೇ, ಇವರು ಅಭ್ಯರ್ಥಿಗಳನ್ನು ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಳ್ಳಲು ಜಿಲ್ಲಾಧಿಕಾರಿಗಳಿಗೆ ಏನು ಅಧಿಕಾರವನ್ನು ಕೊಟ್ಟಿದ್ದಾರೆ. ಇದರಿಂದ ಆಲ್ಲಿ ಯಾವುದೇ ವೈದ್ಯಾಧಿಕಾರಿಗಳು ಬಂದು ಹುದ್ದೆಗಳಿಗೆ ರಿಪೋರ್ಟ್ ಮಾಡಿಕೊಂಡಂಥ ಉದಾಹರಣೆಗಳು ಕಂಡು ಬರುತ್ತಿಲ್ಲ. ತಾವು ನಮ್ಮ ಜಿಲ್ಲೆಗೆ ಬಂದಿದ್ದೀರಿ, ಆಲ್ಲಿ ಸುಮಾರು ಹದಿನಾರು ವೈದ್ಯಾಧಿಕಾರಿಗಳ ಹುದ್ದೆಗಳು ಖಾಲಿ ಇವೆ, ಮತ್ತೆ ಜಿಲ್ಲಾ ಆಸ್ಪತ್ರೆಯಲ್ಲೂ ಕೂಡ ಮೂರು ಜನ ಮಾತ್ರ ಇದ್ದಾರೆ, ಮತ್ತೆ

ಸ್ಪೆಷಲಿಸ್ಟ್‌ಗಳು ಇಲ್ಲ. ತಾವೂ ಕೂಡ ಇಲ್ಲಿಗೆ ಬಂದಾಗ ಈ ಹುದ್ದೆಗಳನ್ನು ತುಂಬುತ್ತೇವೆಂದು ವಾಗ್ದಾನ ಮಾಡಿದ್ದೀರಿ. ಇದರ ಬಗ್ಗೆ ತಾವು ಒಂದು ಪರ್ಯಾಯ ವ್ಯವಸ್ಥೆಗೆ ಬರಬೇಕಾಗುತ್ತದೆ. ಇವತ್ತು ಗ್ರಾಮೀಣ ಮಟ್ಟದಲ್ಲಿ ವೈದ್ಯಾಧಿಕಾರಿಗಳು ಇಲ್ಲ, ಅಲ್ಲಿ ಬರೀ ಆಸ್ಪತ್ರೆಗಳನ್ನು ಕಟ್ಟಿಸಿದ್ದೇವೆ, ಡಾಕ್ಟರ್‌ಗಳು ಇಲ್ಲವೆಂದರೆ ಅಲ್ಲಿ ರೋಗಿಗಳ ಉಪಚಾರವನ್ನು ಮಾಡುವವರು ಯಾರು? ಇವರು ಜಿಲ್ಲಾಧಿಕಾರಿಗಳ ಮಟ್ಟದಲ್ಲಿ ಸರ್ಟಿಫೈ ಮಾಡಿ ವರದಿ ಬರುತ್ತಿಲ್ಲ ಎಂದು ಹೇಳುತ್ತಿದ್ದಾರೆ. ಈ ವಿಚಾರ ಕಳೆದ ಮೂರು ಅಧಿವೇಶನಗಳಲ್ಲೂ ಚರ್ಚೆ ಆಗಿದೆ, ಅಡ್‌ಮಿನಿಸ್ಟ್ರೇಷನ್ ಮಾಡತಕ್ಕಂಥವರಿಗೆ ಕಂಟ್ರೋಲ್ ಅವರ ಮೇಲೆ ಇವರಿಗೆ ಇಲ್ಲವೆಂದರೆ ಇವರು ಹೇಗೆ ಸರ್ಕಾರವನ್ನು ನಡೆಸುತ್ತಾರೆ.

ಡಾ:ಎ.ಬಿ.ಮಾಲಕರೆಡ್ಡಿ: ಮಾನ್ಯ ಅಧ್ಯಕ್ಷರೇ, ವೈದ್ಯರ ಸಮಸ್ಯೆ ಶೇಕಡ 80ರಷ್ಟು ಬಗೆಹರಿದಿದೆ, ಆದರೆ ಪ್ರಾಬ್ಲಂ ಎಲ್ಲಿ ಬರುತ್ತದೆಂದರೆ ಮಾನ್ಯ ಸದಸ್ಯರು ಹೇಳಿದ ಹಾಗೆ ತಾಲ್ಲೂಕು ಮಟ್ಟದಲ್ಲಿ ಬರುತ್ತದೆ, ಜಿಲ್ಲಾ ಮಟ್ಟದಲ್ಲಿ ಅಂದರೆ ಕೊಪ್ಪಳ ಜಿಲ್ಲೆಗೆ ಮಾತ್ರ ಸಮಸ್ಯೆ ಇದೆ, ಉಳಿದ ಜಿಲ್ಲೆಗಳಿಗೆ ಇಲ್ಲ. ಆದರೆ ತಾಲ್ಲೂಕುಗಳಲ್ಲಿ ಈ ಸಮಸ್ಯೆ ಬರುತ್ತಿದೆ, ಇದನ್ನು ಸರ್ಕಾರ ಎಲ್ಲಿಂದ ಮಾಡಬೇಕೆಂಬುದು ಪ್ರಶ್ನೆ, ಇದಕ್ಕೆ ಪ್ರತಿಯೊಬ್ಬ ಜಿಲ್ಲಾಧಿಕಾರಿಗಳು ನೋಟಿಫಿಕೇಷನ್ ಇಷ್ಯೂ ಮಾಡಿ ಅಪ್ಲಿಕೇಶನ್‌ಗಳನ್ನು ಕಾಲ್‌ಫರ್ ಮಾಡಿದ್ದಾರೆ. ಆದರೆ ಅರ್ಜಿಗಳೇ ಬರುತ್ತಿಲ್ಲ, ನಾನು ಉದಾಹರಣೆಗೆ ಹೇಳುವುದಾದರೆ ಗುಲ್ಬರ್ಗಾ ಜಿಲ್ಲೆಯಲ್ಲಿ 48 ಜನ ತಜ್ಞರು ಬೇಕಾಗಿದೆ, ಅಲ್ಲಿ ಅರ್ಜಿಗಳನ್ನು ಹಾಕುವುದಕ್ಕೆ ಕಾಲ್‌ಫಾರ್ ಮಾಡಿದರೆ ಕೇವಲ 16 ಅರ್ಜಿಗಳು ಬಂದಿದೆ, ಈ 16 ಜನರಿಗೆ ನೇಮಕಾತಿ ಆರ್ಡರ್ ಕೊಟ್ಟರೆ, ಅಲ್ಲಿ ಹಾಜರಾದಂತಹ ವೈದ್ಯರ ಸಂಖ್ಯೆ ಕೇವಲ 6 ಜನರು ಮಾತ್ರ. ಸರ್ಕಾರ ಅರ್ಜಿಗಳು ಬರುವುದಕ್ಕೆ ಏನು ಮಾಡಬೇಕು? We have called for applications. When there are no applications, forth coming Government can do? ಅದಕ್ಕೆ ನಾವು ಏನು ಮಾಡಬೇಕಾಗುತ್ತದೆ. ಒಂದು ವಿವರಣೆಗಾಗಿ ತಮಗೆ ಹೇಳುತ್ತೇನೆ. ಮೊನ್ನೆ ಟೈಮ್ಸ್ ಆಫ್ ಇಂಡಿಯಾ ಪ್ರತ್ರಿಕೆಯಲ್ಲಿ Great Britainನಲ್ಲಿ ದೀಡ್ ಸಾವಿರ ಜನ ವೈದ್ಯರು ಬೇಕಾಗಿದೆ, ಎಂದು ಅವರು ನೇಮಕಾತಿ ಪ್ರಕಟಣೆ ಮಾಡಿದರು. ಇದಾದ ನಂತರ ಬೆಳಗಾಂ ಆರೋಗ್ಯಾಧಿಕಾರಿಗಳು ಹೇಳುತ್ತಾ ಇದ್ದರು. 27 ಜನ ವೈದ್ಯರು ಇಲ್ಲಿ ರಾಜೀನಾಮೆಯನ್ನು ಕೊಟ್ಟು ಇಂಗ್ಲೆಂಡ್‌ಗೆ ಹೋಗಿದ್ದಾರೆ, ಇಂಗ್ಲೆಂಡ್‌ನಲ್ಲಿ ವೈದ್ಯರ ಕೊರತೆ ಇರುವುದಕ್ಕೆ ಇಲ್ಲಿ ಅವರು ಪತ್ರಿಕೆಯಲ್ಲಿ ಪ್ರಕಟಣೆಯನ್ನು ಕೊಟ್ಟರು. ಕೆಲವು ಜನ ಇಲ್ಲಿ ಬಿಟ್ಟು ಅಲ್ಲಿಗೆ ಹೋದರು, ಏತಕ್ಕಾಗಿ ಹೋದರು? ಅಲ್ಲಿ ಅವರು ನಮಗಿಂತ ಹತ್ತು ಪಟ್ಟು ಹೆಚ್ಚಿಗೆ ಪಗಾರವನ್ನು ಕೊಡುತ್ತಾರೆಂದು ಮತ್ತೆ ಅಕಾಮಡೇಶನ್ ಪೆಸಿಲಿಟಿಸ್ ಕೊಡುತ್ತೇವೆಂದು ಅವರು ಹೇಳಿದರು, ಅದಕ್ಕೆ ಈ ವೈದ್ಯರುಗಳು ನಮ್ಮಲ್ಲಿದ್ದ ಕೆಲಸವನ್ನು ಬಿಟ್ಟು ಅಲ್ಲಿಗೆ ಹೋದರು, ಮತ್ತೆ ಒಂದು ಸಾವಿರ ನರ್ಸ್‌ಗಳು ಬೇಕೆಂದು

ಪತ್ರಿಕೆಯಲ್ಲಿ ಅವರು ಜಾಹೀರಾತು ಕೊಟ್ಟರು. ಅದೇ ರೀತಿಯಲ್ಲಿ ಒಂದು ಸಾವಿರ ನರ್ಸ್‌ಗಳು ಅಲ್ಲಿಗೆ ಹೋದರು. ಈ ರೀತಿಯಾಗಿ ಇಲ್ಲಿ ಕೊರತೆಯಾಗುತ್ತದೆ.

ಶ್ರೀ ಅರಗ ಜ್ಞಾನೇಂದ್ರ: ಅಧ್ಯಕ್ಷರೇ, ಇವರು ಸಮಸ್ಯೆಗೆ ಪರಿಹಾರ ಹೇಳುತ್ತಿಲ್ಲ.

Mr.SPEAKER: I cannot compel the Minister to answer in a particuler way.

(ಗೊಂದಲ)

ಶ್ರೀ ಅರಗ ಜ್ಞಾನೇಂದ್ರ: ಸರ್ಕಾರ ನಡೆಸುವವರು ಯಾರು? ಸರ್ಕಾರದಲ್ಲಿ ಇದ್ದು ಅವರೇ, ಸಮಸ್ಯೆ ಹೇಳಿದರೆ ಹೇಗೆ?

ಶ್ರೀ ಡಿ.ವಿ.ಸದಾನಂದಗೌಡ(ಪುತ್ತೂರು): ಮಾನ್ಯ ಅಧ್ಯಕ್ಷರೇ, ಜನರು ಊರಲ್ಲಿ ಏನು ಮಾತನಾಡಿಕೊಳ್ಳುತ್ತಾರೆಂದರೆ ಜನರು ಜೀವಂತವಾಗಿ ಸರ್ಕಾರಿ ಆಸ್ಪತ್ರೆಗೆ ಹೋದರೆ ಹೆಣವಾಗಿ ಬರುತ್ತಾನೆ, ಹೆಣವನ್ನು ಪೋಸ್ಟ್‌ಮಾರ್ಟಮ್‌ಗೆ ಎಂದು ತೆಗೆದುಕೊಂಡು ಹೋದರೆ ಅವರು ಸುಸ್ತಾಗಿ ಇನ್‌ಸೆಂಟೀವ್ ಕೇರ್‌ಗೆ ಸೇರಬೇಕಾಗುವುದೆಂದು ಮಾತನಾಡುತ್ತಿದ್ದಾರೆ. ಆಸ್ಪತ್ರೆಗಳಿಗೆ ಜೀವಂತವಾಗಿರುವಂತಹ ರೋಗಿ ಸರ್ಕಾರಿ ಆಸ್ಪತ್ರೆಗೆ ಹೋದರೆ ಹೆಣವಾಗಿ ವಾಪಸ್ಸು ಬರುತ್ತಾನೆ. ನಾನು ಇದನ್ನು ಏಕೆ ಹೇಳುತ್ತಿದ್ದೇನೆಂದರೆ ಡಿ ಗ್ರೂಪ್ ನೌಕರರು ಇಲ್ಲದೇ, ಆಸ್ಪತ್ರೆಗಳಲ್ಲಿ ಹೆಣವನ್ನು ಪೋಸ್ಟ್ ಮಾರ್ಟಮ್ ಮಾಡುವುದಕ್ಕೆ ಆಗುತ್ತಾ ಇಲ್ಲ. ಇದರ ಬಗ್ಗೆ ಬೇಕಾದರೆ ವಿಟ್ಲ ಶಾಸಕರಾದ ಶ್ರೀ ಕೆ.ಎಂ.ಇಬ್ರಾಹಿಂರವರನ್ನು ಕೇಳಿ. ಮೊನ್ನೆ ದಿವಸ ಡಿ ಗ್ರೂಪ್ ನೌಕರರು ಅಲ್ಲಿ ಇಲ್ಲದೇ ಪೋಸ್ಟ್‌ಮಾರ್ಟಮ್ ಆಗದೇ ಇರುವಂತಹ ಪ್ರಸಂಗವನ್ನು ನಾವು ಪತ್ರಿಕೆಗಳಲ್ಲಿ ಜಿಲ್ಲಾ ಪಂಚಾಯತ್‌ನಲ್ಲೂ ಗಲಾಟೆಯಾದಂಥಾದ್ದನ್ನು ಓದಿದ್ದೇವೆ, ಅಲ್ಲಿ ಉಪ್ಪಿನಂಗಡಿಯಲ್ಲಿ ಡಿ ಗ್ರೂಪ್ ನೌಕರರು ಇಲ್ಲದೇ ಪೋಸ್ಟ್‌ಮಾರ್ಟೇಮ್ ಮಾಡುವುದಕ್ಕೆ ಆಗುತ್ತಿಲ್ಲ, ಕನಿಷ್ಟಪಕ್ಷ ಪೋಸ್ಟ್ ಮಾರ್ಟಮ್ ಮಾಡುವುದಕ್ಕಾದರೂ ಒಂದು ವ್ಯವಸ್ಥೆಯನ್ನು ಸರ್ಕಾರಿ ಆಸ್ಪತ್ರೆಗಳಲ್ಲಿ ಮಾಡದಿದ್ದರೆ ಅದರಲ್ಲೂ ರಾಷ್ಟ್ರೀಯ ಹೆದ್ದಾರಿಗಳಲ್ಲಿ ದಿನನಿತ್ಯ ಅಪಘಾತಗಳು ಆಗುತ್ತವೆ. ಇವರು ಆ ಸರ್ಕಾರಿ ಆಸ್ಪತ್ರೆಯಲ್ಲಿ ವೈದ್ಯರು, ಇತರರನ್ನು ಬಿಟ್ಟರೂ, (ಡಿ) ಗ್ರೂಪ್ ನೌಕರರನ್ನು ಪೋಸ್ಟ್ ಮಾರ್ಟಂ ಮಾಡಲು ಸರ್ಕಾರಿ ಆಸ್ಪತ್ರೆಗಳಲ್ಲಿ ಸರ್ಕಾರ ವ್ಯವಸ್ಥೆ ಮಾಡದಿದ್ದರೆ ಹೇಗೆ? ಅದರಲ್ಲೂ ರಾಷ್ಟ್ರೀಯ ಹೆದ್ದಾರಿಗಳಿರುವ ಜಾಗಗಳಲ್ಲಿ ದಿನನಿತ್ಯ ಆಕ್ಸಿಡೆಂಟ್‌ಗಳಾಗುತ್ತವೆ, ಪೋಸ್ಟ್ ಮಾರ್ಟಮ್ ಮಾಡಲು ಹೋದರೆ ಅಲ್ಲಿ 'ಡಿ' ಗ್ರೂಪ್ ನೌಕರರಿರುವುದಿಲ್ಲ ಇದಕ್ಕೂ ಕೂಡ ಪರಿಹಾರ ಕಂಡುಕೊಳ್ಳದ ಸರ್ಕಾರವಿದ್ದರೆ ಇದರ ಪರಿಸ್ಥಿತಿ ಏನು? ಇದರ ಬಗ್ಗೆ ಏನು ಮಾಡುತ್ತೀರಿ ಹೇಳಿ? 'ಡಿ' ಗ್ರೂಪ್ ನೌಕರರಿಲ್ಲದ ಸರ್ಕಾರಿ ಆಸ್ಪತ್ರೆಗಳು ಎಷ್ಟು ಇವೆ

ಹೇಳಿ? ಉದಾಹರಣೆಯಾಗಿ ಉಪ್ಪಿನ ಅಂಗಡಿ, ವಿಟ್ಲವನ್ನು ಕೊಡುತ್ತಿದ್ದೇನೆ, ನಿಮ್ಮ ಡಿಹೆಚ್ಒ ಅನ್ನು ಕೇಳಿ, ಮೊನ್ನೆ ಜಿಲ್ಲಾ ಪಂಚಾಯತ್‌ನಲ್ಲಿ ಗಲಾಟೆಯಾಯಿತು. 'ಡಿ' ಗ್ರೂಪ್ ನೌಕರರಿಲ್ಲದೆ ಅಲ್ಲಿ ಸರ್ಕಾರಿ ಆಸ್ಪತ್ರೆಯಲ್ಲಿ ಪೋಸ್ಟ್ ಮಾರ್ಟಮ್ ಮಾಡದೆ ಹೆಣ ಕೊಳೆತು ನಾರುವಂತಹ ಪರಿಸ್ಥಿತಿ ನಿರ್ಮಾಣವಾಗುತ್ತಿದೆ. ಇದಕ್ಕಾದರೂ ಸರ್ಕಾರ ಎಚ್ಚೆತ್ತುಕೊಳ್ಳಬೇಕಲ್ಲಾ, ಆ ಸರ್ಕಾರಿ ಆಸ್ಪತ್ರೆಗಳಿಗೆ ವೈದ್ಯರನ್ನು ಕೊಡುತ್ತಿಲ್ಲ, ಪೋಸ್ಟ್ ಮಾರ್ಟಮ್ ಅನ್ನು ಖಾಸಗಿ ಆಸ್ಪತ್ರೆಯಲ್ಲಿ ಮಾಡಲಾಗುವುದಿಲ್ಲ ಡಾಕ್ಟರೇ, ಇದಕ್ಕೆ ಏನು ಮಾಡಬೇಕು ಹೇಳಿ, ಸರ್ಕಾರ ಇದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತದೆ?

ಡಾ: ಎ.ಬಿ.ಮಾಲಕರೆಡ್ಡಿ: ಅಧ್ಯಕ್ಷರೆ, ಗ್ರೂಪ್ 'ಡಿ' ನೌಕರರ ಕೊರತೆ ಇದೆ ಎಂಬುದನ್ನು ನಾನೂ ಕೂಡ ಒಪ್ಪಿಕೊಳ್ಳುತ್ತೇನೆ. ನಾನು ಆಗಲೇ ಹೇಳಿದಂತೆ 1988ರಿಂದ ಈ ಹುದ್ದೆಗಳಿಗೆ ನೇಮಕಾತಿಗಳು ಆಗುತ್ತಲೇ ಇಲ್ಲ. ಆರೋಗ್ಯ ಇಲಾಖೆಯಲ್ಲಿ ಒಂದು ವಿಶೇಷವಾದ ಅನುಮತಿಯನ್ನು ತೆಗೆದುಕೊಂಡು, ಡಿಪಿಎಆರ್ ಅನುಮತಿಯನ್ನು ತೆಗೆದುಕೊಂಡು ಗ್ರೂಪ್ 'ಡಿ' ನೌಕರರ ನೇಮಕಾತಿ ಮಾಡಲು ಸರ್ಕಾರ ತಕ್ಷಣ ಕ್ರಮ ತೆಗೆದುಕೊಳ್ಳುತ್ತದೆಂದು ನಾನು ಹೇಳಬಯಸುತ್ತೇನೆ.

ಅಧ್ಯಕ್ಷರು: ಇಲ್ಲಿಗೆ ಚುಕ್ಕೆ ಗುರುತಿನ ಪ್ರಶ್ನೋತ್ತರ ಮುಕ್ತಾಯವಾಯಿತು, ಇನ್ನು ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳಿಗೆ ಉತ್ತರ. ಉಳಿದ ಪ್ರಶ್ನೆಗಳನ್ನು ಮುಂದಿನ ವಾರ ತೆಗೆದುಕೊಳ್ಳುತ್ತೇನೆ. ಅವು ಲ್ಯಾಪ್ಸ್ ಆಗುವುದಿಲ್ಲ.

2(ಆ) ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು

ಶ್ರೀ ಕೆ.ಹೆಚ್.ರಂಗನಾಥ್(ಅರಣ್ಯ ,ಸಚಿವರು): ಮಾನ್ಯ ಅಧ್ಯಕ್ಷರೆ, ದಿನಾಂಕ: 23-01-2002ರಂದು ಸದನದಲ್ಲಿ ಲಿಖಿತ ಮೂಲಕ ಉತ್ತರಿಸುವ ಒಟ್ಟು ಪ್ರಶ್ನೆಗಳು 177ರ ಪೈಕಿ 122 ಪ್ರಶ್ನೆಗಳಿಗೆ ಉತ್ತರಗಳನ್ನು ಮಂಡಿಸುತ್ತಿದ್ದೇನೆ.

ಅಧ್ಯಕ್ಷರು: ಮಂಡಿಸಲಾಯಿತು (ಅನುಬಂಧ-1)